

ಹೊರಟಿದ್ದಳು. ಹವ್ಯಾಸಿ ತಂಡದಲ್ಲಿ ತಾನೂ ಇದ್ದಾಗ, ಅಂಥ ದಿನಗಳಲ್ಲಿಯೆ ಪದ್ಮಳ ಪರಿಚಯವಾಗಿ... ತನ್ನಲ್ಲಿ ಮೃಗವಾಂಛೆ ಹುಟ್ಟಿ, ಮನಸ್ಸೆಂಬುದು ಮಂಗನಂತಾಗಿ, ಕೊನೆಗೆ ಹೂಗಾರ ನಿಂಗಪ್ಪನಿಂದಾಗಿ ಸರಿದಾರಿಗೆ ಬಂತೋ.

* * *

ಅಂದಿನಿಂದ ಪದ್ಮ ಅವನ ತಂಗಿ. ಆತ ಅವಳ ಪ್ರೀತಿಯ ಅಣ್ಣ. ನಾಟಕದ ರಿರ್ಹಸಲ್ ಇಲ್ಲದ ದಿನಗಳಲ್ಲಿ ಅವಳಿದ್ದ ಊರಿಗೆ ಹೋಗಿ ಆಗಾಗ ಭೆಟ್ಟಿಯಾಗುತ್ತಿದ್ದ. ಹಿಂದಿನ ಸಲ ಹೋಗಿದ್ದಾಗ, ಪದ್ಮಳಿಗೆ ಅದೇನು ಹೊಳೆದಿತ್ತೊ, 'ಅಣ್ಣಾ, ನನ್ನೊಂದ್ ಮಾತು, ನಡಿಸಿಕೊಡ್ತಿಯಾ?' ಹಿತೋತ್ತಾಯದ ಧ್ವನಿಯಲ್ಲಿ ಕೇಳಿದ್ದಳು. 'ಇನ್ಮುಂದ್ ನೀ ಹ್ಯಾಂಗ್ ಹೇಳ್ತೀ ಹಂಗೇ ಇರ್ತೀನಿ' ಕಣ್ಣಾಲಿ ತುಂಬ ನೀರು. 'ಹಂಗಿದ್ರ ಛಲೋನೇ ಆತಲವ್ವಾ... ನನ್ನಿಂದೇನಾಗ್ಬೇಕು ಹೇಳು'. 'ನಾನು ಯಾರು?'

'ಏನ್ ಹಂಗಂದ್ರ? ನೀ ನನ್ ತಂಗಿ ಇದ್ದಾಂಗ್'

'ವಸಂತಣ್ಣಾ, ಇದ್ದಾಂಗಕ್ಕೂ...ಇರೋದಕ್ಕೂ ಭಾಳಂದ್ರ ಭಾಳ ಫರಕದ'

'ಓ ಸ್ಸಾರಿ, ನೀ ನನ್ ತಂಗಿ, ಸ್ವಂತ ಅಂದ್ರ ಸ್ವಂತ, ಖಾಸಾ ತಂಗಿ, ಈಗ್ಲಾದ್ರೂ ಸಮಾಧಾನಾಯ್ತೇನು?'

'ಹೂಂ ಹೂಂ. ಇನ್ನೂ ಆಗಿಲ್ಲಾ'.

'ಅಂದ್ರ, ರೊಕ್ಕಾ ಗಿಕ್ಕಾ ಏನಾದ್ರೂ...'

'ಇಲ್ಲಿಲ್ಲ. ನನಗ ದುಡ್ಡು ಗಿಡ್ಡು ಯಾವುದೂ ಬೇಕಾಗಿಲ್ಲ.'

'ಮತ್ತೇನ ಬೇಕವ್ವಾ ತಂಗೀ ನಿನಗ?' ಕಕ್ಕುಲಾತಿಯಿಂದ ಕೇಳಿದ.

'ನನಗೂ ಸಮಾಜದೊಳಗ ಒಂದ್ ಮಾನಾ